# ನೈತಿಕತೆ ಮತ್ತು ಮತೀಯತೆ

'ಧರ್ಮ'ವೆಂದರೆ ಬದುಕುವ ಮಾರ್ಗವನ್ನು ತಿಳಿಸುವ ಸಿದ್ಧಾಂತ. ಇಲ್ಲಿ 'ಬದುಕುವ ಮಾರ್ಗ'ವೆಂದರೆ ಸನ್ನಡತೆಯ ತಿಳಿವಳಿಕೆಯನ್ನು ಜನರಲ್ಲಿ ಮೂಡಿಸುವುದು ಮತ್ತು ಆ ಮೂಲಕ ಸಮಸಮಾಜವನ್ನು ರೂಪಿಸುವ ಮನೋಸ್ಥಿತಿಯನ್ನು ಸಮುದಾಯದಲ್ಲಿ ಮೂಡಿಸುವುದು. ಈ ಸಮಸಮಾಜದ ವ್ಯಾಪ್ತಿಯಲ್ಲಿ ಕೇವಲ ಮನುಷ್ಯಮಾತ್ರವಿರದೆ, ಅವನ ಸುತ್ತಮುತ್ತಲಿನ ಸಮಸ್ತ ಜೀವಜಗತ್ತು ಕೂಡ ಸೇರಿರುತ್ತದೆ. ಏಕೆಂದರೆ ಬದುಕು ಎಂಬುದು ಸಮಸ್ತ ಜೀವಿಗಳ ಪರಸ್ಪರ ಅವಲಂಬನೆ ಮತ್ತು ಒಡನಾಟದಲ್ಲಿ ಅರಳುತ್ತದೆ. ಮನುಷ್ಯಜೀವಿಗೆ ಹೊಳೆ, ಬೆಟ್ಟ, ಕಾಡು, ಸಣ್ಣಪುಟ್ಟ ಸಸ್ಯಸಂಪತ್ತು, ಪ್ರಾಣಿಸಂಪತ್ತು ಬದುಕು ಮಾಡಲು ಬೇಕೇಬೇಕು. ಅವಿಲ್ಲದಿದ್ದರೆ ಅವನು ಅಸಹಾಯಕನಾಗುತ್ತಾನೆ, ನೆಲೆ ಕಳೆದುಕೊಳ್ಳುವ ಸ್ಥಿತಿಗೆ ಬರುತ್ತಾನೆ. 'ಧರ್ಮ'ದ ಈ ಬದುಕುವ ಮಾರ್ಗದಲ್ಲಿ ನಿಯತಿಗನುಸಾರವಾದ ಒಂದು 'ಬಂಧ'ವಿರುತ್ತದೆ, ಆದರೆ ನಿರ್ಬಂಧವಿರುವುದಿಲ್ಲ; ಚಂದವಿರುತ್ತದೆ, ಆದರೆ, ಸ್ವಚ್ಛಂದವಿರುವುದಿಲ್ಲ. ಪ್ರತಿ ಜೀವಿಗೂ ತನ್ನ ನಿಯತಿಗನುಗುಣವಾಗಿ ದೊರೆಯುವ ಸ್ವಾತಂತ್ರ್ಯವನ್ನು ಅನುಭವಿಸಬಹುದು, ಆದರೆ ಮತ್ತೊಂದು ಜೀವಿಯ ಸ್ವಾತಂತ್ರ್ಯವನ್ನು ಹರಣಮಾಡುವ ಹಕ್ಕಿರುವುದಿಲ್ಲ. ಸಮಾನತೆ ಮತ್ತು ಸ್ವಾತಂತ್ರ್ಯ ಜೀವಿಗಳ ಮೂಲಭೂತ ಹಕ್ಕು ಎಂದು ರೂಪತಾಳುವುದು ಈ ನೆಲೆಯಿಂದಲೇ.

ಧಾರ್ಮಿಕ ಸನ್ನಡತೆಯ ಮಾರ್ಗಗಳನ್ನು, ಸಮಾಜವನ್ನು ಸಮಗ್ರವಾಗಿ ಅಧ್ಯಯನ ಮಾಡಿರುವಂಥ ಜ್ಞಾನಿ–ಸಂತ–ತಿಳಿವಳಿಕಸ್ಥ ಜನರಿಗೆ ಹೇಳುತ್ತಾನೆ. ಕೆಲವೊಮ್ಮೆ ಒಂದು ಸಮಾಜದ ಅನುಭವಸ್ಥರು ತಾವು ಕಂಡುಂಡ ತಿಳಿವಳಿಕೆಯನ್ನು 'ಸೂಳ್ನುಡಿ'ಗಳಲ್ಲಿ ಹೇಳಿರಬಹುದು. ಈ ತಿಳಿವಳಿಕೆಯ ಮಾತುಗಳು ವ್ಯಕ್ತಿಯ ಸನ್ನಡತೆಯ ಮಾರ್ಗವನ್ನು ನಿರ್ದೇಶಿಸುತ್ತವೆ. ಸನ್ನಡತೆಯ ಅನಿವಾರ್ಯತೆ ಸಾಮಾಜಿಕ ಶಾಂತಿ ಮತ್ತು ಸೌಂದರ್ಯವರ್ಧನೆಗೆ ಅತ್ಯಗತ್ಯ. ಸನ್ನಡತೆಗೆ ಪ್ರತಿಯಾಗಿ 'ದುರ್ನಡತೆ' ಇದ್ದೇ ಇರುತ್ತದೆ. ಈ ದುರ್ನಡತೆಯು ಸಾಮಾಜಿಕ ಶಾಂತಿಯನ್ನು ಕದಡಿ, ಕೂಡುಬಾಳುವಿಕೆಯ ಸೌಂದರ್ಯವನ್ನು ನಾಶಮಾಡಿ, ಅಸಮಾನತೆಯನ್ನು ಸೃಷ್ಟಿಸುತ್ತದೆ. 'ಇದು ತಪ್ಪು, ಸನ್ಮಾರ್ಗದಲ್ಲಿ ನಡೆದು, ನೀವೂ ಬದುಕಿ, ಇತರರ ಬದುಕನ್ನೂ ನೆಮ್ಮದಿಯಾಗಿರಲು ಬಿಡಿ. ಬೇರೆಯವರ ಅಳುವಿನಲ್ಲಿ ಕಾಣುವ ಸಂತೋಷ ವಿಕೃತವಾದುದು; ಅವರ ಸಹಜ ನಗುವಿನಲ್ಲಿ ನಾವು ಅನುಭವಿಸುವ ಆನಂದ ಮೈಮನಗಳನ್ನು ಮುದಗೊಳಿಸುತ್ತದೆ; ಆಗ ಇಡೀ ಪರಿಸರ ನಮಗೆ ಪ್ರಿಯವೆನ್ನಿಸಿ ಅದು ಕೂಡ ನಗುತಿರುವಂತೆ ಭಾಸವಾಗುತ್ತದೆ.' ಧರ್ಮ ಹೇಳಿಕೊಡಬಹುದಾದ ತಿಳಿವಳಿಕೆಯ ನೀತಿ ಮಾತಿದು.

'ನೀತಿ' ಎಂದರೆ ನಡತೆ; ಒಳ್ಳೆಯ ನಡತೆ. ಇದು ಅತ್ಯಂತ ಸರಳ ತಿಳಿವಳಿಕೆ. ಈ ಸರಳ ತಿಳಿವಳಿಕೆಯೇ ಜೀವಜಗತ್ತಿನ ನೆಮ್ಮದಿಯ ಸೌಂದರ್ಯವನ್ನು ಕಾಪಾಡುವ ಸತ್ಯಸಂಗತಿ. 'ನೀತಿ'ಎಂಬುದು ಒಟ್ಟು ಸಮಾಜದ ಸೃಷ್ಟಿಯಾದುದರಿಂದ ಬದುಕಿನಿಂದ ಕಲಿತಪಾಠವಾಗಿರುತ್ತದೆ. ಎಲ್ಲ ಚಿಂತಕರು, ತಿಳಿವಳಿಕಸ್ಥರು ಈ ಬದುಕನ್ನು ಗ್ರಹಿಸಿ, ಸಂವೇದಿಸಿ, ಶೋಧಿಸಿ, ವಿಶ್ಲೇಷಿಸಿ ಮಾಡಿರುವ ಚಿಂತನೆಯೇ ಈ ನೀತಿ ಸೂತ್ರಗಳು.

ನೈತಿಕತೆಗೆ ಮತೀಯ ಸೋಂಕು ಇರುವುದಿಲ್ಲ. ಒಬ್ಬ ನೀತಿವಂತನು ಸರ್ವಜೀವನವನ್ನು ಸಮಾನವಾಗಿ ಕಾಣುವವನಾದುದರಿಂದ ಅವನು'ಮತಾತೀತ'ನಾಗಿರುತ್ತಾನೆ; ಪ್ರೀತಿವಂತನಾಗುತ್ತಾನೆ, ಆದರೆ ಮತೀಯತೆಯ ಸೆರಗಿನಲ್ಲಿರುವ ವ್ಯಕ್ತಿಗೆ ತಾನು, ತನ್ನದು, ತಾನು ನಂಬಿರುವ ತತ್ವ ಶ್ರೇಷ್ಠವೆಂಬ ಅಹಂಕಾರವಿರುವುದರಿಂದ ಇತರ ಮತೀಯರನ್ನು ತುಚ್ಛವಾಗಿ ಕಾಣುತ್ತಾನೆ. ಅವನ ದೃಷ್ಟಿ ಸಮಗ್ರತೆಯನ್ನು ಅರಿಯಲಾರದಷ್ಟು, ಇತರ ಜೀವಬದುಕು ತನ್ನಷ್ಟೇ ಉತ್ತಮವಾದುದೆಂದು ಪರಿಭಾವಿಸುವಷ್ಟು ವಿಕಾಸಶೀಲವಾಗಿರುವುದಿಲ್ಲ, 'ಧರ್ಮ'ದ ಸಾರ್ವತ್ರಿಕ ಸತ್ಯಚಿಂತನೆಗಳನ್ನು ದೂರತಳ್ಳಿ, ತನ್ನ ಅಹಂಭಾವವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಸಂಪ್ರದಾಯಗಳನ್ನು ಕಂದಾಚಾರಗಳನ್ನು ಜಾರಿಗೆ ತಂದು ಅವನ್ನೇ ಬದುಕಿನ ನಡೆಯ ನಿಯಮಗಳೆಂದು ಮಾಡಿ ಭದ್ರಗೊಳಿಸುತ್ತಾನೆ. ಇಂಥ ನಿಯಮಗಳನ್ನು ಪ್ರಶ್ನಿಸುವ ಮೀರುವ ವ್ಯಕ್ತಿಗಳನ್ನು ಧರ್ಮದ್ರೋಹಿಗಳೆಂದೂ ಸಮಾಜಕಂಟಕರೆಂದೂ ಕರೆದು ಪ್ರಭುತ್ವವನ್ನು ಬಳಸಿಕೊಂಡು ಶಿಕ್ಷೆಗೆ ಗುರಿಯಾಗಿಸುತ್ತಾನೆ. ಇದರಿಂದ ಸಿದ್ಧವ್ಯವಸ್ಥೆಯನ್ನು ಪ್ರಶ್ನಿಸಿ ವಿರೋಧಿಸುವವರಿಗೆ ಜೀವಭಯದ ಸಂದೇಶ ನೀಡಿತ್ತಾನೆ. ದುರ್ಬಲರನ್ನು, ಸ್ತ್ರೀಯರನ್ನು ಎರಡನೆಯ ದರ್ಜೆಯವರೆಂದು ಕರೆದು ಸಾಮಾಜಿಕ ಅಸಮಾನತೆ– ಲಿಂಗಸಮಾನತೆಯನ್ನು ಮಾನ್ಯಮಾಡಿ, ಅದು ಮುಂದುವರಿಯುವಂಥ ನಿಯಮಗಳನ್ನು ರೂಪಿಸುತ್ತಾನೆ. ಇಂಥವರಿಗೆ ಅಕ್ಷರ ಜ್ಞಾನದ ತಿಳಿವಳಿಕೆ ಬಾರದಂತೆ ಎಚ್ಚರವಹಿಸಿ ಅಜ್ಞಾನದ ಕತ್ತಲಲ್ಲಿ ನೂಕುತ್ತಾನೆ. ಬಡತನಕ್ಕೆ, ಅಸಮಾನತೆಯ ನರಳಾಟಕ್ಕೆ, ಸುಖದುಃಖಗಳಿಗೆ ಜನ್ಮಾಂತರ ಕರ್ಮಫಲವೇ ಕಾರಣವೆಂದು ನಂಬಿಕೆ ಹುಟ್ಟಿಸುತ್ತಾನೆ. ತಿಳಿವಳಿಕೆಯಿಲ್ಲದ ಮನಸ್ಸುಗಳಿಗೆ ದೇವರು–ದೆವ್ವಗಳ ಭಯವನ್ನುಂಟು ಮಾಡಿ, ಜೋತಿಷ್ಯ, ಹೋಮ, ಹವನ, ಯಜ್ಞಗಳಂಥ ಶೋಷಣೆ ಮಾಡುವ ತಂತ್ರಗಳನ್ನು ರೂಪಿಸಿ, ಆ ಮೂಲಕ ಹಣ ಸಂಪಾದನೆ ಮಾಡುತ್ತಾನೆ. ತನ್ನ ಉಳಿವಿಗಾಗಿ ಅನ್ಯಮತೀಯರ ಮೇಲೆ ಮುಗ್ಧರನ್ನು ದಾಳಿಗಿಳಿಸಿ ಸಮಾಜದಲ್ಲಿ ದ್ವೇಷ ಅಸೂಯೆಗಳನ್ನು ಹೆಚ್ಚು ಮಾಡುತ್ತಾನೆ. ಇವನಿಂದ ಸಮಾಜ ಅಸ್ವಸ್ಥತೆಯ ಗೂಡಾಗುತ್ತದೆ.

ಮತೀಯವಂತನಿಗೆ ತದ್ವಿರುದ್ಧವಾಗಿ ನೀತಿವಂತ ಪ್ರೀತಿ ವಿಶ್ವಾಸ ಸಮಾನತೆಗಳನ್ನೇ ಉಸಿರಾಡಿ ಮಾನವೀಯ ಪರಿಸರವನ್ನು ಜೀವಂತವಾಗಿಡಲು ಯತ್ನಿಸುತ್ತಾನೆ. ಅವನ ದೃಷ್ಟಿ ಸಮಗ್ರಜೀವಿಯ ಬದುಕಿನ ಹಕ್ಕನ್ನು ಸಮರ್ಥಿಸುತ್ತದೆ. ಅವನ ಮತಾತೀತ ಮನಸ್ಸು ಕೇವಲ ಪ್ರೀತಿಯನ್ನು ಅರಸುತ್ತದೆ, ಸೂಸುತ್ತದೆ.

**■ ಶಿಕಾಕು**

## ಮಾತೇ ಮುತ್ತು

★ ಕಷ್ಟಗಳನ್ನು ಎದುರಿಸಲು ಮಕ್ಕಳಿಗೆ ಕಲಿಸಿ. ಸಂಘರ್ಷಗಳಿಂದ ಮನುಷ್ಯನ ಸ್ಫೂರ್ತಿ ದೃಢವಾಗುತ್ತದೆ.

-ವಿಲಿಯಂ ಚಾನಿಂಗ್

★ ಎಲ್ಲರೂ ತಪ್ಪುಗಳನ್ನು ಮಾಡುತ್ತಾರೆ. ಆದರೆ ಬುದ್ಧಿವಂತರು ಮಾತ್ರ ತಪ್ಪುಗಳಿಂದ ಪಾಠ ಕಲಿಯುತ್ತಾರೆ.

-ವಿನ್‌ಸ್ಟನ್ ಚರ್ಚಿಲ್

★ ಕನ್ನಡ ಪದಗೊಳ್ ಆಡೋದ್ನೆಲ್ಲ
ನಿಲ್ಲಿಸ್ ಬುಡಬೇಕ್ ರತ್ನ
ಅಂತ್ ಔನ್ ಅಂದ್ರೆ – ದೇವ್ರ್ ಆದ್ರ್ ಏನು
ಮಾಡ್ತೀನ್ ಔನ್ಗೆ ಖತ್ನ!

-ಜಿ.ಪಿ.ರಾಜರತ್ನಂ

★ ಪರಿಸ್ಥಿತಿ ಮನುಷ್ಯನನ್ನು ರೂಪಿಸುವುದಿಲ್ಲ; ಆತ ಏನು ಎನ್ನುವುದನ್ನು ಬಯಲುಗೊಳಿಸುತ್ತದೆ.

-ಜೇಮ್ಸ್ ಅಲನ್

★ ಸರಿಯಾದ ರೀತಿಯಲ್ಲಿ ಓದುವ ಅಭಿರುಚಿ ಬೆಳೆಸಿಕೊಂಡರೆ, ಅದೇ ಒಂದು ಶಿಕ್ಷಣ.

-ಜೇನ್ ಆಸ್ಟಿನ್

★ ಸುಳ್ಳುಗಳನ್ನು ಸತ್ಯದಂತೆ ಕೇಳಿಸುವುದು ಮತ್ತು ಕೊಲೆಗಳನ್ನು ಗೌರವಾರ್ಹಗೊಳಿಸುವುದೇ ರಾಜಕೀಯ ಭಾಷೆಯ ಕೆಲಸ.

–ಜಾರ್ಜ್ ಆರ್ವೆಲ್

★ ವೇಗವಾಗಿ ಓದುವುದು ಮುಖ್ಯವಲ್ಲ, ವೇಗವಾಗಿ ಅರ್ಥ ಮಾಡಿಕೊಳ್ಳುವುದು ಮುಖ್ಯ.

-ಐಸಾಕ್ ಅಸಿಮೊವ್

★ ಬುದ್ಧಿವಂತಿಕೆಯನ್ನು ಜೀವನದಲ್ಲಿ ತೊಡಗಿಸಿ. ಪ್ರತಿಭೆಯನ್ನು ಕೆಲಸದಲ್ಲಿ ತೊಡಗಿಸಿ.

-ಆಸ್ಕರ್ ವೈಲ್ಡ್

★ ಕಾಯಬೇಕು ಮತ್ತು ಭರವಸೆ ಇಡಬೇಕು. ಅದುವೇ ಜೀವನದ ಸಾರ.

-ಅಲೆಕ್ಸಾಂಡರ್ ಡುಮಾಸ್

★ ಯೌವನದಲ್ಲಿ ಶಿಸ್ತಿನ ಜೀವನ ನಡೆಸಿದವನು ಇಳಿವಯಸ್ಸಿನಲ್ಲಿ ನೆಮ್ಮದಿಯಿಂದ ಬದುಕುತ್ತಾನೆ.

-ಲಿಡಿಯಾ ಚೈಲ್ಡ್